**ಇಂದು ದಿಃ 14-02-2023 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ.ಎಂ.ಎಸ್ ವಕೀಲರಿಂದಃ**

ವಾದಿ ಮತ್ತು ಪ್ರತಿವಾದಿಯರ ತಂದೆಯ ಕುಟುಂಬಕ್ಕೆ ನಾನೇ ಹಿರಿಯ ಸೊಸೆ ಎಂದರೆ ಸರಿ. ನನ್ನ ಮದುವೆಯಾದ ನಂತರ, 3 ರಿಂದ 5 ನೇ ಪ್ರತಿವಾದಿಯರ ಮದುವೆಯನ್ನು 1 ನೇ ಪ್ರತಿವಾದಿಯೇ ಮಾಡಿದ್ದಾನೆ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಮಾಡಿದ್ದಾನೆ. ನನ್ನ ಹಿರಿಯ ಮಗ ಬಿ.ಎಸ್ಸಿ, ಎಂ.ಬಿ.ಎ ಪಧವೀಧರನಾಗಿದ್ದಾನೆ. 2 ನೇ ಮಗ ಐ.ಟಿ.ಐ ಹಾಗೂ ಮಗಳು ಬಿ.ಕಾಂ ವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ನನ್ನ 3 ಜನ ಮಕ್ಕಳು ಖಾಸಗೀ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ನನ್ನ ಹಿರಿಯ ಮಗ ಮಾತ್ರ ಖಾಸಗೀ ಶಾಲೆಯಲ್ಲಿ ಓದಿದ್ದಾನೆ. ನನ್ನ ಉಳಿದ ಇಬ್ಬರೂ ಮಕ್ಕಳು ಯಾವ ಕಾಲೇಜ್ ನಲ್ಲಿ ಓದಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಇಬ್ಬರ ಗಂಡು ಮಕ್ಕಳ ಮದುವೆಯಾಗಿರುವುದಿಲ್ಲ. ನಾನು, ನನ್ನ ಗಂಡ ಮತ್ತು ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿದ್ದೇವೆ. ಕೋಡಿಹಳ್ಳಿ ಪೂರ್ಣ ಜಮೀನನ್ನು ನನ್ನ ಗಂಡ ಸಾಗುವಳಿ ಮಾಡುತ್ತಿದ್ದಾರೆಂದರೆ ಸರಿ. ನನ್ನ ಮದುವೆಯ ಕಾಲಕ್ಕೆ ನನ್ನ ತವರು ಮನೆಯವರು ರೂ.17 ಸಾವಿರ ವರಧಕ್ಷಣೆ ಕೊಟ್ಟಿದ್ದಾರೆಂದರೆಂದರೆ, ಸಾಕ್ಷಿಯು ರೂ.20 ಸಾವಿರಗಳನ್ನು ಜಮೀನನ್ನು ಖರೀಧಿಸಲು ಕೊಟ್ಟಿದ್ದಾರೆ. ಮದುವೆಯ ಕಾಲಕ್ಕೆ ವರಧಕ್ಷಣೆ ಕೊಟ್ಟಿರುವುದಿಲ್ಲ. ನನ್ನ ತವರು ಮನೆಯವರು ಹೊಲ ಮನೆ ಕೆಲಸ ಮಾಡುತ್ತಾರೆಂದರೆ ಸರಿ. ನನ್ನ ತವರು ಮನೆಯವರು ನೌಕರಿ ಅಥವಾ ಬಿಜಿನೆಸ್ ಮಾಡುವುದಿಲ್ಲ. ನನ್ನ ಮಗಳ ಹೆಸರು ಹೆಚ್.ಕೆ ಆಶಾ. ನಿ.ಪಿ-28 ರಿಂದ 30 ಓಟರ್ ಲೀಸ್ಟ ನಲ್ಲಿ ನಮ್ಮ ಕುಟುಂಬದ ಸದಸ್ಯರ ಹೆಸರುಗಳು ನಮೂದಾಗಿವೆಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 3 ನೇ ಕಂಡಿಕೆಯಲ್ಲಿ ಹೇಳಿದ ವಿಚಾರಗಳನ್ನು ನನ್ನ ತಕರಾರಿನಲ್ಲಿ ಹೇಳಿ ಬರೆಯಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 6 ನೇ ಕಂಡಿಕೆಯಲ್ಲಿ ನಾನು ದಿನಾಂಕಃ11-06-1989 ರಂದು 1 ನೇ ಪ್ರತಿವಾದಿಯೊಂದಿಗೆ ಲಗ್ನವಾಗಿ ನನ್ನ ಗಂಡ ಸರ್ಕಾರಿ ಜಾಗದಲ್ಲಿ ಪಡೆದ ಜಾಗದಲ್ಲಿ ಕಟ್ಟಿದ ಮನೆಗೆ ಬಂದೆನು. ಆ ಸಮಯದಲ್ಲಿ ದಾವಾ ಸಿ ಶೆಡ್ಯೂಲ್ ಸ್ವತ್ತಿನ 3 ಮತ್ತು 4 ನೇ ಆಸ್ತಿಗಳಲ್ಲಿ ಏಕತರ್ಕರವಾಗಿ ಒಂದೇ ಮನೆ ಇತ್ತು ಎಂದು ಬೆರಯಿಸಿದ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿ ಬರೆಯಿಸಿಲ್ಲ ಎಂದರೆ ಸರಿ. 1989 ರಲ್ಲಿ ಮನೆ ಇದ್ದು, ನಾನು ಮದುವೆಯಾದಗಿನಿಂದಲೂ ಅಲ್ಲೇ ವಾಸವಾಗಿದ್ದೇನೆಂದು ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಮದುವೆಯಾದ ನಂತರ ಒಟ್ಟು ಕುಟುಂಬದ ಮನೆಗೆ ಬಂದಿರುವುದರಿಂದ, ದಾಖಲೆಯನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. 2005 ರಲ್ಲಿ ನನ್ನ ಗಂಡ ಅರ್ಧ ಭಾಗವನ್ನು ಯಾವ ದಿನಾಂಕ, ತಿಂಗಳು ವರ್ಗಾಹಿಸಿದ್ದಾರೆಂದು ನನಗೆ

ಗೊತ್ತಿಲ್ಲ. ಆ ಕುರಿತು ನಾನು ದಾಖಲೆಯನ್ನು ಹಾಜರುಪಡಿಸಿದ್ದೇನೆ. 2005 ರಿಂದ 2010 ರವರೆಗೆ ಹನಗವಾಡಿ ಗ್ರಾಮ ಪಂಚಾಯಿತಿಯ ಸದಸ್ಯಳಾಗಿದ್ದೇನು ಎಂದರೆ ಸರಿ. ನಾನು ಅಧಿಕಾರ ದುರ್ಭಳಕೆ ಮಾಡಿಕೊಂಡು ದಾವಾ ಸಿ ಶೆಡ್ಯೂಲ್ ನಲ್ಲಿ 4 ನೇ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಗಂಡ ಚಿಕ್ಕ ವಯಸ್ಸಿನಲ್ಲಿ ಏಕೆ ಮನೆ ಬಿಟ್ಟು ಹೋಗಿದ್ದಾರೆಂದು, ನನ್ನ ತಕರಾರಿನಲ್ಲಿ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ. ನನ್ನ ಗಂಡ ಮನೆ ಬಿಟ್ಟು ಹೋಗಿ ಎಲ್ಲಿ ವಾಸವಾಗಿದ್ದರು ಎನ್ನುವುದನ್ನು ಹೇಳಿದ್ದೇನೆ. ನಿ.ಡಿ-69 ಭಾವ ಚಿತ್ರದಲ್ಲಿ ಕಾಣುವ ಮನೆ ಮುರಿಗೆಪ್ಪನ ಪಾಲಿಗೆ ಬಂದಿತ್ತು ಎನ್ನುವುದು ಸರಿ. ಸದರಿ ಮನೆ ಇರುವ ಸ್ಥಳವನ್ನು ಪೂಜಾರ್ ಓಣಿ ಅಥವಾ ಅಳಸಬಾಳರ ಓಣಿ ಎಂದು ಕರೆಯುತ್ತಾರೆಂದರೆ ಸರಿ. ಸಾಕ್ಷಿದಾರರಾದ ಶಿವುಕುಮಾರ ಸ್ವಾಮಿಯವರ ಹಳೆ ಮನೆ ಅದೇ ಓಣಿಯಲ್ಲಿ ಬರುತ್ತದೆಂದರೆ ಸರಿ. ಶಿವುಕುಮಾರ ಸ್ವಾಮಿಯವರ ಮನೆಯ ಬಾಗಿಲು ಪೂರ್ವಕ್ಕೆ ಮುಖ ಮಾಡಿತ್ತು, ನಿ.ಡಿ-69 ರಲ್ಲಿ ಕಾಣಿಸುವ ಮನೆ ಪಶ್ಚಿಮಕ್ಕೆ ಮುಖ ಮಾಡಿತ್ತು ಎಂದರೆ ಸರಿ. ಹನಗವಾಡಿ ಗ್ರಾಮದಲ್ಲಿರುವ ಪಿತ್ರಾರ್ಜಿತ ಆಸ್ತಿಗಳಲ್ಲಿ ಎಲೆ ಬಳ್ಳಿ, ಹತ್ತಿ, ಕಬ್ಬು ನಮ್ಮ ಮಾವನವರು ಬೆಳೆಯುತ್ತಿದ್ದರು. ಒಟ್ಟು ಕುಟುಂಬದ ಆಧಾಯದಿಂದ ನನ್ನ ಗಂಡ ಕೋಡಿಹಳ್ಳಿ ಗ್ರಾಮದ ಜಮೀನನ್ನು ಖರೀದಿಸಿದ್ದಾರೆಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನ್ನ ಗಂಡ ಒಟ್ಟು ಕುಟುಂಬದಲ್ಲಿ ಸಾಗುವಳಿ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. 3 ಜಮೀನುಗಳನ್ನು ಆಧಾರವಾಗಿಟ್ಟು ಟ್ರಾಕ್ಟರ್ ನ್ನು ತಂದಿದ್ದರೂ ಸಹ, ಒಂದೇ ಜಮೀನನ್ನು ಆಧಾರ ಮಾಡಿ ಟ್ರಾಕ್ಟರ್ ತಂದಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಟ್ರಾಕ್ಟರ್ ನ್ನು ಮಾರಾಟ ಮಾಡಿ, ನನ್ನ ಗಂಡ ನನಗೆ ಬಂಗಾರ ಮಾಡಿಸಿಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. 1999 ರ ವಿಭಾಗ ಪತ್ರ ಆಗುವ ಕಾಲಕ್ಕೆ ನನ್ನ ಮಗಳು ಆಶಾಗೆ 7 ವರ್ಷ ವಯಸ್ಸಾಗಿತ್ತು. ಆಕೆಗೆ ಯಾವುದೇ ಪಾಲನ್ನು ಕೊಟ್ಟಿರುವುದಿಲ್ಲ. ನನ್ನ ಗಂಡು ಮಕ್ಕಳಿಗೆ ವಿಭಾಗ ಕಾಲಕ್ಕೆ 8-9 ವರ್ಷ ವಯಸ್ಸು ಆಗಿತ್ತು. ಕೋಡಿಹಳಿಳ್ಳ ಜಮೀನುಗಳಲ್ಲಿ ವಾದಿಗೆ ಪಾಲು ಕೊಡಬಾರದೆಂಬ ದುರುದ್ದೇಶದಿಂದ ವಿಭಾಗ ಪತ್ರ ಸೃಷ್ಠಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ನನ್ನ ಗಂಡ ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಗಂಡ ಮಕ್ಕಳಿಗೆ ಸಹಾಯವಾಗಬೇಕೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.